೧	೨	೩	೪
೧೧೮	ಒಡಹೊಳಹಳ್ಳಿ	೧೬೩	—
೧೧೯	ಬೆದರಹಳ್ಳಿ	೧೬೪	೫೧
೧೨೦	ಅಮೃತ	೧೬೮	೬೩
೧೨೧	ಕಮ್ಮಾಚಿ	೧೬೭	—
೧೨೨	ಹುಲಗದ್ದೆ	೧೬೫	೪
೧೨೩	ಜಂಬಾಲೆ	೧೬೬	೨೨
೧೨೪	ಹಲಂದೂರು	೧೬೯	೬
೧೨೫	ವಂಂದುಸೊಪ್ಪ	೧೭೦	೨೩೯
೧೨೬	ಹಿಳಕುಂಜಿ	೧೭೧	೨
೧೨೭	ಎಡೂರು	೧೭೬	೧೭೩
೧೨೮	ಕೊಟ್ಟಿಕೊಪ್ಪ	೧೭೭	—
೧೨೯	ಸುಲಗೊಡ	೧೮೫	—
೧೩೦	ನಿಡಗೊಡ	೧೮೬	೭೩
೧೩೧	ಕಬಳೆ	೧೯೦	೧೨
೧೩೨	ಕೀಲಂದೂರು	೧೯೩	೫೫
೧೩೩	ಬ್ರಹ್ಮನಪದ	೧೯೭	೧೩
೧೩೪	ಅರಮನೆ ಕೊಪ್ಪ	೨೦೩	೩೭
೧೩೫	ಕುಂಬತ್ತಿ	೨೦೬	೫
೧೩೬	ಕಾರಕ್ಕಿ	೮೬	—
೧೩೭	ಬಾಳೂರು	೧೧೩	—
	ಒಟ್ಟು		೩೭೧೭

ಹೊಸನಗರ ತಾಲೂಕಿನ ಗ್ರಾಮಗಳಿಗೆ ವಿದ್ಯುತ್ ಒದಗಿಸುವುದರ ಬಗ್ಗೆ.

೧೧೦೬ ಶ್ರೀ ಬಿ. ಸ್ವಾಮಿರಾವ್(ಹೊಸನಗರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸನಗರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ.

ಆ) ಪ್ರತಿ ಗ್ರಾಮದಲ್ಲಿಯೂ ಎಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ.

ಇ) ಇನ್ನೂ ಒದಗಿಸಬೇಕಾದ ಗ್ರಾಮಗಳಂ ಮತ್ತು ಮನೆಗಳೆಷ್ಟು ?

ಈ) ಉಳಿದಿರುವ ಮನೆಗಳಿಗೆ ಎಷ್ಟು ದಿನಗಳಲ್ಲಿ ವಿದ್ಯುತ್ ಒದಗಿಸಲಾಗುವುದು.

ಶ್ರೀ ಜೆ. ಎಸ್. ದೇಶಮುಖ್(ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಹೊಸನಗರ ತಾಲ್ಲೂಕಿನಲ್ಲಿ ೧೯೭೧ರ ಜನಗಣತಿಯಂತೆ ೨೦೦ ಜನ ವಾಸವಿರುವಗ್ರಾಮಗಳಿದ್ದು ಅವುಗಳ ಪೈಕಿ ೩೧–೧೨–೧೯೮೬ರ ವೇಳೆಗೆ ೧೩೭ ಗ್ರಾಮಗಳ ವಿದ್ಯುದ್ದೀಕರಣವಾಗಿದೆ.

ಆ) ೧೩೭ ಗ್ರಾಮಗಳಲ್ಲಿ ಒಟ್ಟು ೩,೭೧೭ ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ವಿವರ ವನ್ನು ಅನುಬಂಧದಲ್ಲಿ ನೀಡಿದೆ.

ಇ) ಇನ್ನೂ ೬೩ ಜನವಾಸವಿರುವ ಗ್ರಾಮಗಳು ವಿದ್ಯುದ್ದೀಕರಣವಾಗಬೇಕಾಗಿದ್ದು ಅವುಗಳಲ್ಲಿ ಒಟ್ಟು ೨೫೯ ಮನೆಗಳಿವೆ.

ಈ) ವಿದ್ಯುದ್ದೀಕರಣವಾಗಿರುವ ಗ್ರಾಮಗಳಲ್ಲಿ ಬಾಕಿ ಉಳಿದಿರುವ ಮನೆಗಳಿಗೆ ಅರ್ಜಿಗಳು ಬಂದಂತೆಲ್ಲಾ ವಿದ್ಯುತ್ ಒದಗಿಸಲಾಗುವುದು ಬಾಕಿ ಉಳಿದಿರುವ ಗ್ರಾಮಗಳಿಲ್ಲವನ್ನೂ ಏಳನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ವಿದ್ಯುದ್ದೀಕರಣ ಮಾಡುವ ಗುರಿ ಇದೆ. ಇದು ಮಂಡಳಿಯ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ.

ರಾಜ್ಯದಲ್ಲಿರುವ ಉಗ್ರಾಣಿಗಳ ಸಂಬಳದಲ್ಲಿನ ತಾರತಮ್ಯದ ಬಗ್ಗೆ.

೯೫೪ ಶ್ರೀ ಆರ್. ಎನ್. ನಾಯ್ಕ(ಭಟ್ಕಳ).—ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಗ್ರಾಣಿ (ಗ್ರಾಮಲೆಕ್ಕಿಗಳ ಸಿಪಾಯಿ) ಗಳ ಸಂಖ್ಯೆ ಎಷ್ಟು, ಹಾಗೂ ತಲಾ ಅವರಿಗೆ ಪ್ರತಿದಿವಸ ಸಂಬಳ ಎಷ್ಟು ?

ಆ) ಸರ್ಕಾರದವರು ನಿರ್ಧರಿಸಿದ ಪ್ರತಿ ಕೂಲಿಯ ಸಂಬಂಳಕ್ಕಿಂತ ಉಗ್ರಾಣಿಗಳ ಪ್ರತಿ ದಿವಸದ ಸಂಬಳ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಇವರಿಗೆ ಸಂಬಂಳ ಹೆಚ್ಚಿಸುವ ಬಗ್ಗೆ ಬೇಡಿಕೆಗಳು ಸರ್ಕಾರದವರ ಮುಂದಿದೆಯೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ೧೦,೪೫೦. ತಿಂಗಳಿಗೆ ೧೨೦–೦೦ ರೂಪಾಯಿಗಳ ನಿಗದಿತ ಸಂಭಾವನೆ ಪಾವತಿ ಮಾಡ ಲಾಗುತ್ತಿದೆ.

ಆ) ಬಂದಿದೆ,

ಇ) ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ ಬೇಡಿಕೆಗಳು ಸರ್ಕಾರಕ್ಕೆ ಬಂದಿವೆ.

ಈ) ಈ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಡೂರ ತಾಲ್ಲೂಕಿಂ ಕಛೇರಿ ಕಟ್ಟಡ ಕಟ್ಟಿಸುವ ಬಗ್ಗೆ

೧೩೫೯ ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸಂಡೂರಿನಲ್ಲಿ ತಾಲ್ಲೂಕಿಂ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದಿಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ತಾಲ್ಲೂಕಿಂ ಕಛೇರಿಯ ಕಟ್ಟಡವನ್ನು ಈ ವರ್ಷದಲ್ಲಿಯೇ ಆದ್ಯತೆಯ ಮೇರೆಗೆ ಕಟ್ಟಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ,

ಇ) ತಾಲೂಕಿಂ ಕಛೇರಿಯ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ಹೌದು

ಆ) ಇಲ್ಲ.

ಇ) ರೂ. ೨೧.೬೦ ಲಕ್ಷ

ವಿದ್ಯುತ್ ಜೋತಾದಿಂದ ಕೈಗಾರಿಕೆಗಳಿಗೆ ಆಗಿರುವ ತೆ ಂದರೆಗಳ ನಿವಾರಣೆ ಎಂದು?

೧೨೨೪ ಶ್ರೀ ಪಂಪಾಪತಿ(ದಾವಣಗೆರೆ).— ಮಾನ್ಯ ವಿದ್ಯುತ್, ಗಣಿ ಹಾಗೂ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?